## ಜೆಎಸ್‌ಎಸ್ ಮಹಾವಿದ್ಯಾಪೀಠ
## ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಶಿವಾನುಭವ ದಾಸೋಹ–280

**28 ಆಗಸ್ಟ್ 2021 * ಶನಿವಾರ * ಸಂಜೆ 6.00**

**ಡಿಜಿಟಲ್ ಕಾರ್ಯಕ್ರಮ**

**ದಿವ್ಯ ಸಾನ್ನಿಧ್ಯ**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ

ಸುತ್ತೂರು ಶ್ರೀಕ್ಷೇತ್ರ

**ಉಪನ್ಯಾಸ**



**ಡಾ. ಸಿ. ನಾಗಣ್ಣ**

ಸಂದರ್ಶಕ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

**ವಿಷಯ: ಶರಣರ ಚಿಂತನೆಯಲ್ಲಿ ಮನೆಯ ಪರಿಕಲ್ಪನೆ**

(ಉಪನ್ಯಾಸದ ನಂತರ ಆನ್‌ಲೈನ್‌ನಲ್ಲಿ ಬರುವ ಪ್ರಶ್ನೆಗಳಲ್ಲಿ ಆಯ್ದವುಗಳಿಗೆ ಉತ್ತರಿಸಲಾಗುವುದು)

**ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಹಾರ್ದಿಕ ಸ್ವಾಗತ**

LIVE STREAMING

YouTube http://Youtube.com/c/JSSMahavidyapeethaonline

https://www.facebook.com/JSSMVP

ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪ್ರಸಾದ ನಿಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜನತೆಯ ಸರ್ವಾಂಗೀಣ ಉನ್ನತಿಗೆ ಕಾರಣರಾದರು. ಶಿಕ್ಷಣದ ಮೂಲಕ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಅವರು ಮನಗಂಡಿದ್ದರು. ಶ್ರೀಗಳವರು ಜಾತಿ, ಮತ, ಪಂಥ, ಧರ್ಮ ಭೇದವಿಲ್ಲದೆ ಅನ್ನದಾಸೋಹ, ಜ್ಞಾನದಾಸೋಹದ ಜೊತೆಗೆ ವ್ಯಕ್ತಿಗಳ ಸಮಗ್ರ ಅಭಿವೃದ್ಧಿಗಾಗಿ, ನೈತಿಕತೆ ಹಾಗೂ ಧಾರ್ಮಿಕತೆ ಪ್ರಸಾರಕ್ಕಾಗಿ ಹಲವಾರು ದಶಕಗಳ ಹಿಂದೆಯೇ ಶರಣತತ್ತ್ವ ಪ್ರಸಾರ ಸಮಿತಿ ಮುಂತಾದ ಹಲವಾರು ಸಂಸ್ಥೆಗಳ ಮೂಲಕ ಧರ್ಮ ದಾಸೋಹವನ್ನು ನಡೆಸುತ್ತಿದ್ದರು. 1986 ರಲ್ಲಿ ಶರಣ ಸಾಹಿತ್ಯ ಪರಿಷತ್ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳನ್ನು ಸ್ಥಾಪಿಸಿ ಅದಕ್ಕೊಂದು ಹೊಸ ಆಯಾಮವನ್ನು ನೀಡಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ 'ಶಿವಾನುಭವ ದಾಸೋಹ' ಕಾರ್ಯಕ್ರಮವನ್ನು ದಿನಾಂಕ 12.5.1996 ರಂದು ಪ್ರಾರಂಭಿಸಲಾಯಿತು. ಅಂದಿನಿಂದಲೂ ಪ್ರತಿ ತಿಂಗಳ ಕೊನೆಯ ಶನಿವಾರದಂದು ಈ ಕಾರ್ಯಕ್ರಮವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಧರ್ಮ, ದರ್ಶನ, ವಚನ ಸಾಹಿತ್ಯ, ಧರ್ಮಗಳ ತೌಲನಿಕ ವಿವೇಚನೆ, ಜೀವನಕಲೆ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತಿದೆ.

ಪ್ರತಿವರ್ಷದಂತೆ ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಈ ವರ್ಷವೂ ಶ್ರಾವಣಮಾಸದ ಪ್ರವಚನ ಜರುಗುತ್ತಿದೆ. ಇದೇ ಶನಿವಾರ ಶಿವಾನುಭವ ದಾಸೋಹ ಕಾರ್ಯಕ್ರಮ ನಡೆಯಲಿದೆ.

**ಪ್ರೊ. ಸಿ. ನಾಗಣ್ಣನವರು** ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಎಂಎ ಪದವೀಧರರು. ಮೂರೂವರೆ ದಶಕಗಳಿಂದ ಅಧ್ಯಾಪನ, ಸಂಶೋಧನೆಗಳಲ್ಲಿ ನಿರತರಾಗಿರುವವರು. ತೌಲನಿಕ ಸಾಹಿತ್ಯ ಮತ್ತು ಭಾಷಾಂತರ ಅಧ್ಯಯನದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಾವ್ಯ, ವಿಮರ್ಶೆ, ಭಾಷಾಂತರ ಇವರ ಆಸಕ್ತಿಯ ಕ್ಷೇತ್ರಗಳು. ಕನ್ನಡ ಮತ್ತು ಇಂಗ್ಲಿಷಿನಲ್ಲಿ ಸುಮಾರು 50 ಕೃತಿಗಳನ್ನು ರಚಿಸಿದ್ದಾರೆ. ವಿಶ್ವವಿದ್ಯಾನಿಲಯ ಪ್ರಸಾರಾಂಗದ ನಿರ್ದೇಶಕರಾಗಿ ಸಲ್ಲಿಸಿದ ಸೇವೆ ಉಲ್ಲೇಖಾರ್ಹ. ಕೇಂದ್ರ ಸಾಹಿತ್ಯ ಅಕ್ಯಾಡೆಮಿಯಲ್ಲಿಯೂ ಕೆಲ ಕಾಲ ಸೇವೆ ಸಲ್ಲಿಸಿರುತ್ತಾರೆ. ಭಾರತೀಯ ಜ್ಞಾನಪೀಠ, ಸರಸ್ವತೀ ಸಮ್ಮಾನ್ ಮುಂತಾದ ಪ್ರತಿಷ್ಠಿತ ಪ್ರಶಸ್ತಿಗಳ ಸಲಹಾ ಸಮಿತಿಗಳಲ್ಲಿ ಮತ್ತು ಕರ್ನಾಟಕ ಸಾಹಿತ್ಯ ಅಕ್ಯಾಡೆಮಿಯ ಸದಸ್ಯರಾಗಿ ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ ತಜ್ಞರು, ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ವಿಶಿಷ್ಟ ಛಾಪು ಮೂಡಿಸಿದ ಗ್ರಾಮಾಂತರ ಪ್ರತಿಭೆ. ಕಳೆದ ಹತ್ತು ವರ್ಷಗಳಿಂದಲೂ ಮೈಸೂರು ದಸರಾ ಮೆರವಣಿಗೆಯ ವೀಕ್ಷಕ ವಿವರಣೆ ನೀಡುತ್ತಿರುವುದು ಇವರ ಹೆಗ್ಗಳಿಕೆ. ಅಮೆರಿಕದ ಅಟ್ಲಾಂಟಿಕ್ ಸಿಟಿಯಲ್ಲಿ ಆಯೋಜಿತವಾಗಿದ್ದ "ಅಕ್ಕ" ಸಮ್ಮೇಳನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಇವರ ಬಹುಮುಖ ಪ್ರತಿಭೆ, ಸಾಧನೆ, ವಿದ್ವತ್ತುಗಳನ್ನು ಗುರುತಿಸಿ ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು, ಮಠಮಾನ್ಯಗಳು ಇವರಿಗೆ ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿ ಗೌರವಿಸಿವೆ.